ವಾರದ ಪತ್ರ

## ‘ಕನ್ನಡತಿ’ಯಲ್ಲಿ ನಿರ್ಗಮನ ಪರ್ವ

ಕಲರ್ಸ್ ಕನ್ನಡದ ‘ಕನ್ನಡತಿ’ಯಲ್ಲೂ ನಿರ್ಗಮನದ ಪರ್ವ ಆರಂಭವಾಗಿದೆ. ವಿಲನ್ ಸಾನಿಯಾ ಪಾತ್ರವಹಿಸಿದ್ದ ರಮೋಲಾ ಧಾರಾವಾಹಿಯಿಂದ ಹೊರಬಿದ್ದಿದ್ದು ‘ಹೂಮಳೆ’ ಖ್ಯಾತಿಯ ಅರೋಹಿ ನೈನಾ ಆ ಜಾಗವನ್ನು ತುಂಬುತ್ತಿದ್ದಾಳೆ. ಇತ್ತೀಚೆಗಷ್ಟೇ ‘ಮಂಗಳಗೌರಿ’ ಧಾರಾವಾಹಿಯಲ್ಲಿ ಮೂವರು ಹೊರ ಹೋಗಿದ್ದರು.

ಪಾತ್ರದಾರಿಗಳು ಬಿಟ್ಟು ಹೋಗುವುದು ದೊಡ್ಡ ಸುದ್ದಿಯಲ್ಲ. ಆದರೆ, ತಮ್ಮ ಅಮೋಘ ಅಭಿನಯದಿಂದ ವೀಕ್ಷಕರನ್ನು ಸೆಳೆದವರು ನಿರ್ಗಮಿಸಿದಾಗ ಯಾಕೆ, ಏನು ಎನ್ನುವ ಕುತೂಹಲ ಕಾಡುತ್ತದೆ. ಒಂದೇ ರೀತಿಯ ಪಾತ್ರದಲ್ಲಿ ಸುದೀರ್ಘವಾಗಿ ಕಾಣಿಸಿಕೊಂಡ ಪರಿಣಾಮ ಏಕತಾನತೆಯಿಂದ ಹೊರಬೀಳುವ ಆತುರವೋ ಏನೋ ಗೊತ್ತಿಲ್ಲ. ಯಾರೇ ಬರಲಿ, ಹೋಗಲಿ, ‘ಕನ್ನಡತಿ’ ಮುಂದುವರೆಯುತ್ತದೆ. ಆದರೆ, ಅವರ ನಿರ್ಗಮನ ಈ ಧಾರಾವಾಹಿಗೆ ಸ್ವಲ್ಪ ಹಿನ್ನಡೆ ಎನ್ನುವುದು ಸತ್ಯ.

—ರಮಾನಂದ ಶರ್ಮಾ, ನವದೆಹಲಿ

## ಅಮ್ಮಮ್ಮ ಇರಬೇಕು

ಕಲರ್ಸ್ ಕನ್ನಡದ ‘ಕನ್ನಡತಿ’ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಒಂದಿಷ್ಟು ದಿನ ಜನರ ತಾಳ್ಮೆ ಪರೀಕ್ಷಿಸಿದ್ದ ಧಾರಾವಾಹಿ ಈಗ ಪುನಃ ತನ್ನ ಹಳೆಯ ಪಥದಲ್ಲಿ ಸಾಗುತ್ತಿದೆ. ಈ ಧಾರಾವಾಹಿ ಯಾವುದೇ ಜನಪ್ರಿಯ ಸಿನಿಮಾ ಕತೆಗೂ ಭಿನ್ನವಾಗಿಲ್ಲ. ಅಮ್ಮಮ್ಮ, ಭುವಿಯ ಬಳಿ ತನ್ನ ಮಗನ ಜೀವನಕ್ಕೆ ಶಿಕ್ಷಕಿಯಾಗುತ್ತೀಯಾ ಎಂದು ಕೇಳಿದ ರೀತಿ ಅದ್ಭುತವಾಗಿತ್ತು. ಆದರೆ ಯಾವುದೇ ಕಾರಣಕ್ಕೂ ಅಮ್ಮಮ್ಮ ಸಾಯಬಾರದು. ಅಮ್ಮಮ್ಮ ಧಾರಾವಾಹಿ ಅಂತ್ಯದವರೆಗಿದ್ದರಷ್ಟೇ ಧಾರಾವಾಹಿ ನೋಡಲು ಉತ್ತಮವಾಗಿರುತ್ತದೆ.

—ಸುಷ್ಮಾ, ಬೆಂಗಳೂರು

## ಮಿಸ್ಸಿಂಗ್ ಬಿಗ್‌ಬಾಸ್

ಬಿಗ್‌ಬಾಸ್ ಕಾರ್ಯಕ್ರಮವನ್ನು ತುಂಬಾನೇ ಮಿಸ್ ಮಾಡಿಕೊಳ್ಳುತ್ತಿದ್ದೇವೆ. ದಿನಕ್ಕೆರಡು ಬಾರಿ ರೀ ಟೆಲಿಕಾಸ್ಟ್ ಆಗುತ್ತಿದ್ದುದರಿಂದ ನಮ್ಮ ಮಧ್ಯಾಹ್ನದ ಬೇಸರವನ್ನು ಕಳೆಯಲೂ ಸಾಧ್ಯವಾಗುತ್ತಿತ್ತು. ಬಿಗ್‌ಬಾಸ್‌ನ ಕಂಚಿನ ಕಂಠದಲ್ಲಿ ಬರುವ ಸೂಚನೆ, ನಿರ್ದೇಶನಗಳನ್ನು ಕೇಳುವುದೇ ಒಂದು ಆನಂದ. ಸ್ಪರ್ಧಿಗಳ ಬೆಳಗಿನ ಜೋಶ್, ಮಧ್ಯಾಹ್ನದ ಆಕಳಿಕೆ, ರಾತ್ರಿಯ ಪಿಸುಮಾತುಗಳು, ಅವರ ಜಗಳ—ಕಿತ್ತಾಟಗಳನ್ನು ನೋಡುವುದು ಸಹ ಒಂದು ಥರದ ಮೋಜು. ಧಾರಾವಾಹಿಗಳ ಅದದೇ ಕಥೆಗಳನ್ನು ನೋಡುವುದು ಬಹಳ ಬೇಸರವಾಗುತ್ತಿದೆ. ಮತ್ತೆ ಬಿಗ್‌ಬಾಸ್ ಯಾವಾಗ ಆರಂಭವಾಗುವುದೊ ಎಂದು ಕಾತರಿಸುತ್ತಿದ್ದೇವೆ.

—ಸುಶೀಲಾ ಬೆಂಗಳೂರು

## ಚಿಂಟೂ ಪಿಂಟೂ

ನಮ್ಮ ಮೊಮ್ಮಗಳು ಟೀವಿಯನ್ನು ನೋಡುತ್ತಾ ಊಟ ಮಾಡುತ್ತಿದ್ದಳು. ಇಂದಿನ ಮಕ್ಕಳು ಟೀವಿಯಲ್ಲಿ ಕಾರ್ಟೂನ್ ನೋಡದಿದ್ರೆ ಅನ್ನ ಗಂಟಲಲ್ಲಿ ಇಳಿಯುವುದಿಲ್ಲ. ಅಂದು ಚಿಂಟು ಟೀವಿಯಲ್ಲಿ ‘ಲವಕುಶ’ ಪ್ರಸಾರವಾಗುತ್ತಿತ್ತು. ಕುತೂಹಲದಿಂದ ವೀಕ್ಷಿಸಿದೆ. ಮಹರ್ಷಿ ವಾಲ್ಮೀಕಿ ಹೆಸರಿನ ಆಶ್ರಮವಿದೆ. ಆದರೆ ಎಲ್ಲಿಯೂ ರಾಮಾಯಣದ ಸೊಗಡಾಗಲಿ ಗಂಧವಾಗಲಿ ಇಲ್ಲ.

ಯಾವುದೋ ಕಾಲದ ಮಂತ್ರವಾದಿ, ಕಪಟ ಸನ್ಯಾಸಿ, ಭಾರೀ ಹೆಬ್ಬಾವು, ಮಾಯಮಂತ್ರ, ಬ್ರಹ್ಮರಾಕ್ಷಸ, ಚಿತ್ರ ವಿಚಿತ್ರ ಪ್ರಾಣಿಗಳು ! ಇದು ರಾಮಾಯಣದ ಲವಕುಶ ಕಥೆಯೇ? ವಸ್ತ್ರವಿನ್ಯಾಸ, ಆಶ್ರಮದ ಹೊರತಾಗಿ ಎಲ್ಲವೂ ಚರ್ವಿತಚರ್ವಣ. ನಮ್ಮ ಸಂಸ್ಕೃತಿ, ಪುರಾಣ ಇತಿಹಾಸ ಸಾರುವ ರಾಮಾಯಣವನ್ನೇ ಮಕ್ಕಳಿಗೆ ತೋರಬಹುದಿತ್ತಲ್ಲ? ಇದಕ್ಕೆ ‘ಲವಕುಶ’ ಬದಲು ‘ಚಿಂಟೂ ಪಿಂಟೂ’ ಎಂದಾದರೂ ಹೆಸರಿಡಿ.

—ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

## ಅಭಿನಂದನೆ

ಕನ್ನಡತಿಯ ಸಾನಿಯಾ ಪಾತ್ರ ಬದಲಾವಣೆ ಅನಿರೀಕ್ಷಿತ. ಆ ನಟಿ ಸಾನಿಯಾ ಪಾತ್ರಕ್ಕೆ ತುಂಬಾ ಕಳೆ ತುಂಬಿದ್ದರು. ನಿಜಕ್ಕೂ ಅವರ ಹಾವ, ಭಾವ ಆ ಪಾತ್ರಕ್ಕೆ ಹೇಳಿ ಮಾಡಿಸಿದಂತೆ ಇತ್ತು. ಅವರು ಆ ಪಾತ್ರವನ್ನು ತುಂಬಾ ಲೀಲಾಜಾಲವಾಗಿ ಆಡುತ್ತಿದ್ದರು. ಸ್ಪಷ್ಟ ಕನ್ನಡ ಉಚ್ಚಾರಣೆ ಕೂಡ ಚೆನ್ನಾಗಿತ್ತು. ಅಂತೂ ಅವರಿಗೆ ಸೌಪರ್ಣಿಕಾ ಯಾರು ಅಂತ ಗೊತ್ತಾಗಲಿಲ್ಲ. ನಿಜಕ್ಕೂ ಆ ನಟಿ ಎಂಥ ಪಾತ್ರವನ್ನು ಮಾಡಬಲ್ಲೆ ಎಂದು ಸಾಬೀತು ಮಾಡಿದರು. ಅವರಿಗೆ ಈ ಮೂಲಕ ಅಭಿನಂದನೆಗಳು.

—ರಾಮಚಂದ್ರ ನಾಡಿಗ್

## ಚಂದನಕ್ಕೆ ಮುಕುಟ ಪ್ರಾಯ




ಚಂದನ ವಾಹಿನಿ 20 ವರ್ಷಗಳ ಜ್ಞಾನ ದಾಸೋಹ: ಥಟ್ ಅಂತಾ ಹೇಳಿ ಎಂಬ ವಿಶೇಷ ಕಾರ್ಯಕ್ರಮ ಪ್ರಸಾರ ಮಾಡಿದ ರೀತಿ ನಿಜಕ್ಕೂ ಚಿರಸ್ಮರಣೀಯ. ಚಂದನ ಅಂದ ಕೂಡಲೇ ಥಟ್ ಅಂತಾ ನೆನಪಾಗುವುದು ‘ಥಟ್ ಅಂತಾ ಹೇಳಿ’ಯ ರಸ ಪ್ರಶ್ನೆ ಕಾರ್ಯಕ್ರಮ.

ಎಲ್ಲಾ ಕ್ಷೇತ್ರಗಳಿಂದ ಸರಿ ಸುಮಾರು ಐವತ್ತೈದು ಸಾವಿರಕ್ಕೂ ಹೆಚ್ಚಿನ ಪ್ರಶ್ನೆಗಳನ್ನ ಆಯ್ಕೆ ಮಾಡಿ ಅತ್ಯಂತ ಸರಳ ಮತ್ತು ಸುಲಲಿತವಾಗಿ ನಿರೂಪಣೆ ಮಾಡುವುದು ಸಾಧಾರಣ ವಿಷಯವಲ್ಲ ಬಿಡಿ. ವೀಕ್ಷಕರಿಗೆ 20 ವರ್ಷಗಳ ಕಾಲ ಜ್ಞಾನ ದಾಸೋಹ ನೀಡಿದ ಶ್ರೇಯಸ್ಸು ಚಂದನಕ್ಕೆ ಸಲ್ಲಬೇಕು.

ಈಗಾಗಲೇ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆ ಮಾಡಿದ ‘ಥಟ್ ಅಂತಾ ಹೇಳಿ’ ನಂತರ ಗಿನ್ನೆಸ್ ದಾಖಲೆಯತ್ತ ದಾಪುಗಾಲು ಹಾಕುತ್ತಿರುವ ಚಂದನ ವಾಹಿನಿಯ ತಂಡಕ್ಕೆ ಶುಭ ಕೋರೋಣ.

—ಆರ್. ವೀರೇಶ್ ಕುಮಾರ್, ಬೆಂಗಳೂರು

ಸಂತೋಷ ಹೆಚ್ಚಿಸಿದ ಸಂಭ್ರಮ: ಚಂದನದ ‘ಥಟ್ ಅಂತ ಹೇಳಿ’ ಕಾರ್ಯಕ್ರಮ 20 ವರ್ಷಗಳು ಪೂರೈಸಿದ ಸಂತೋಷ ಆಚರಣೆ ತುಂಬಾ ಚೆನ್ನಾಗಿ ಮೂಡಿ ಬಂತು. ಸೋಮೇಶ್ವರ 20 ವರ್ಷ ನಡೆದು ಬಂದ ಬಗೆಯನ್ನು ಬಹಳ ಚೆನ್ನಾಗಿ ಹೇಳಿದರು. ಗುರುರಾಜ ಕರ್ಜಗಿ ಚೆನ್ನಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ನಾನೂ 2021ರ ಸೆಪ್ಟೆಂಬರ್‌ನಲ್ಲಿ ಭಾಗವಹಿಸಿದ್ದೆ.

—ಕಮಲಾದೇವಿ ರಾಜಶೇಖರ ಹಳೂರ್

ಕಲಹ ಅತೀತ: ‘ಥಟ್ ಅಂತ ಹೇಳಿ’ ಚಂದನದ ವಿಶಿಷ್ಟ ಜನಪ್ರಿಯ ಕಾರ್ಯಕ್ರಮ. ಇಪ್ಪತ್ತು ವರ್ಷಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ವಿಶ್ವದ ನಾನಾ ಮಾಹಿತಿಗಳು ಪ್ರಶ್ನೆಗಳ ರೂಪದಲ್ಲಿ ಹರಿದು ಬರುತ್ತಿವೆ. ಇದು ಎರಡು ದಶಕಗಳಿಂದ ಪಡೆಯಬಹುದಾದ ಅತಿರೇಕವಲ್ಲದ ಚೊಕ್ಕ ಕಾರ್ಯಕ್ರಮ.

ಇಲ್ಲಿನ ಪ್ರಶ್ನಾವಳಿಯಲ್ಲಿ ಸರಿ ಉತ್ತರಕ್ಕೆ ಸಿಗುವ ಗೌರವ ಕನ್ನಡ ಪುಸ್ತಕಗಳು. ಅತ್ತೆಸೊಸೆ, ಆಸ್ತಿ ಕಲಹಗಳ ಧಾರಾವಾಹಿಗಳ ನಡುವೆ ರಾತ್ರಿ ಪ್ರಸಾರವಾಗುವ ಈ ಪರಿವಿಡಿ ‘ಲಾಕ್‌ಡೌನ್’ನಿಂದ ಸಿಗುವ ಸಡಿಲಿಕೆಯಂತೆ ನಿರಾಳ.

—ಹೆಚ್.ವಿ. ಶ್ರೀಧರ್, ಬೆಂಗಳೂರು